# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹಿರಿಯ ಶ್ರೇಣಿ, ತೀರ್ಥಹಳ್ಳಿ

**ಸಿ.ಸಿ. ನಂ. 1071/2023**

**ಪಿಡಬ್ಲ್ಯೂ-1**

ದಿಃ17-02-2025 ರಂದು ಪ್ರಮಾಣಿಕರಿಸಲಾಯಿತು.

**ಪಾಟೀ ಸವಾಲುಃ ಶ್ರೀ T.L.M ವಕೀಲರಿಂದ**

ನಾನು 2004 ರಿಂದ ಸಹ್ಯಾದ್ರಿ ಸೊಸೈಟಿಯಲ್ಲಿ ಕೆಲಸ ಮಾಡುತ್ತಿದ್ದೇನೆ. 2004 ರಲ್ಲಿ ಗುಮಾಸ್ತನಾಗಿದ್ದೆ. ಈಗ ರಿಕವರಿ ಆಫೀಸರ್ ಆಗಿರುತ್ತೇನೆ. 2019 ನೇ ಇಸವಿಯಿಂದ ನನಗೆ ಕೇಸ್ ನಡೆಸಲು ಅಧಿಕಾರ ಕೊಟ್ಟಿರುತ್ತಾರೆ. ಇದಕ್ಕೂ ಮೊದಲು ಮೇಧಿನಿ ಎಸ್ ಕುಮಾರ್ ಎಂಬುವವರು ಕೆಲಸ ಮಾಡುತ್ತಿದ್ದರು. ಸಂಸ್ಥೆ ವ್ಯವಹಾರದ ಬಗ್ಗೆ ಮೇಧಿನಿ ಯವರು ಯಾರ ವಿರುದ್ಧ ಏನೆಲ್ಲ ಕೇಸು ಹಾಕಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಈ ಕೇಸನ್ನು ಮೇಧಿನಿಯವರು ದಿಃ28.03.2013 ನೇ ಸಾಲಿನಲ್ಲಿ ಕೇಸು ಹಾಕಿದ್ದರು. ಸಾಕ್ಷಿ ಮುಂದುವರಿದು ದಿನಾಂಕ ಸರಿಯಾಗಿ ನೆನಪಿಲ್ಲ ಎನ್ನುತ್ತಾರೆ. 28.03.2013 ರಂದು ಚೆಕ್ಕು ಅಮಾನ್ಯ ಗೊಂಡ ಬಗ್ಗೆ ಲೀಗಲ್ ನೋಟೀಸನ್ನು ಆರೋಪಿಗೆ ಕಳುಹಿಸಿರುತ್ತಾರೆ. ಚೆಕ್ಕನ್ನು ನಮ್ಮ ಕಛೇರಿಯ ಸಿಬ್ಬಂದಿ ವರ್ಗದವರು ದಿಃ28.03.2013 ರಂದು ಪ್ರೆಸೆಂಟ್ ಮಾಡಿರುತ್ತಾರೆ. ನಾವು ವರ್ತಕರಿಗೆ ಮತ್ತು ರೈತರು ಮತ್ತು ವ್ಯವಹಾರಸ್ಥರಿಗೆ ಸಾಲವನ್ನು ಕೊಡುತ್ತೇವೆ. ಆರೋಪಿಯು ಶಿವಮೊಗ್ಗದಲ್ಲಿ ವಾಸ ಮಾಡಿಕೊಂಡಿದ್ದರು. ನಮ್ಮ ಬೈಲಾದಲ್ಲಿ ಶಿವಮೊಗ್ಗವೂ ಕೂಡ ನಮ್ಮ ವ್ಯಾಪ್ತಿಗೆ ಬರುವುದರಿಂದ ಶಿವಮೊಗ್ಗದಲ್ಲಿ ವಾಸಮಾಡಿಕೊಂಡಿರುವವರಿಗೂ ಸಾಲ ಕೊಡತ್ತೇವೆ. ನಮ್ಮ ಬೈಲಾದಲ್ಲಿ ಯಾರು ಯಾರಿಗೆ ಸಾಲ ಕೊಡಬೇಕು ಯಾವರೀತಿ ವಸೂಲುಮಾಡುತ್ತೇವೆ ಎಂದು ಇದೆ ಎಂದರೆ ಸರಿ. ಬೈಲಾವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಕೆಲವವೊಂದು ಪ್ರಕರಣದಲ್ಲಿ ಡಿಆರ್ ಸಿ ಎಸ್ ಗೆ ಕೂಡ ಹಾಕುತ್ತೇವೆ ಎಂದರೆ ಸರಿ. ನಾವು ಯಾರು ಯಾರಿಗೆ ಸಾಲ

ಕೊಟ್ಟಿದ್ದೇವೆ ಮತ್ತು ಹೇಗೆ ರಿಕವರಿ ಮಾಡುತ್ತೇವೆ ಎಂದು ಮಾಹಿತಿ ಇರುತತದೆ ಎಂದರೆ ಸರಿ. ಈ ಕೇಸಿನಲ್ಲಿ ಆರೋಪಿಗೆ ಸಂಬಂಧಿಸಿದಂತಹ ಖಾತೆ ಇರುತ್ತದೆ. ಖಾತೆಯ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಕಛೇರಿಯಲ್ಲಿ ಇರುತ್ತದೆ. ಗ್ರಾಹಕರಿಗೆ ಸಾಲ ಕೊಡುವಾಗ ಸಾಲದ ಅರ್ಜಿ ಮತ್ತು ಪೇಮೆಂಟ್ ವೋಚರ್ ನ್ನು ಪಡೆದುಕೊಳ್ಳುತ್ತೇವೆ. ನಮ್ಮ ಬೋರ್ಡ್ ಆಫ್ ಡೈರೆಕ್ಟರ್ ನಲ್ಲಿ ರೆಸಲ್ಯೂಷನ್ ಮಾಡಿ ಅದು ಪಾಸಾದ ನಂತರವೇ ನಾವು ಸಾಲ ಕೊಡುತ್ತೇವೆ ಎಂದರೆ ಸರಿ.

ಆರೋಪಿಗೆ 2007 ರಲ್ಲಿ 22 ಲಕ್ಷದ 22 ಸಾವಿರ ಸಾಲ ತೆಗೆದುಕೊಂಡಿರುತ್ತಾರೆ. 2005 ನೇಸಾಲಿನಿಂದ ಆರೋಪಿಯು ನಮ್ಮಲ್ಲಿ ವ್ಯವಹಾರ ಮಾಡುತ್ತಿರುತ್ತಾರೆ. ಅದಕ್ಕೆ ಸಂಬಂಧಿಸಿದಂತಹ ದಾಖಲೆಗಳು ನಮ್ಮ ಬಳಿ ಇರುತ್ತದೆ ಎಂದರೆ ಸರಿ. 2007 ರಲ್ಲಿ ಆರೋಪಿಗೆ ಸಾಲ ಕೊಟ್ಟಿರುತ್ತೇವೆ. ಆದರೆ ದಿನಾಂಕ ನೆನಪಿಲ್ಲ. ಸಾಲ ಮಂಜೂರು ಮಾಡುವಾಗ ಟ್ರೇಡಿಂಗ್ ಲೈಸನ್ಸ್ ನ ದೃಢೀಕೃತ ಪ್ರತಿ ಮತ್ತು ಬಾಕಿ ಮೊತ್ತದ ದೃಢೀಕರಣ ಪತ್ರವನ್ನು ಪಡೆದುಕೊಳ್ಳುತ್ತೇವೆ. ಸದರಿ ದಾಖಲೆಗಳು ನಮ್ಮ ಕಛೇರಿಯಲ್ಲಿ ಇರುತ್ತದೆ. ಸದರಿ ದಾಖಲೆಗಳ ದೃಢೀಕೃತ ಪ್ರತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಆರೋಪಿಯು ಅಡಿಕೆ ಮಾರಾಟ ಮಾಡಿ ಒಂದು ವಾರದಲ್ಲಿ ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದರು. ಅಡಿಕೆ ವ್ಯಾಪಾರಕ್ಕೆ ಸಂಬಂಧಿಸಿದಂತೆ ನಮ್ಮ ಬಳಿ ದಾಖಲೆಗಳು ಇರುತ್ತದೆ. ನಾವು ವರ್ಷಕ್ಕೆ ಆಡಿಟ್ ಮಾಡಿಸುತ್ತೇವೆ ಎಂದರೆ ಸರಿ. ಸದರಿ ಆಡಿಟ್ ನಲ್ಲಿ ಆರೋಪಿಯು ಕೊಡಬೇಕಾದಂತಹ ಬಾಕಿಯನ್ನು ಕಾಣಿಸಿರುತ್ತೇವೆ. ಆರೋಪಿಯ ಸದಸ್ಯತ್ವದ ಸಂಖ್ಯೆಯು ನೆನಪಿಲ್ಲ. ಆರೋಪಿಯ ಖಾತೆ ಸಂಖ್ಯೆ ಹೇಳಲಾಗುವುದಿಲ್ಲ, ದಾಖಲೆ ನೋಡಿ ಹೇಳಬೇಕು. ಆರೋಪಿಯು ದಿಃ30-03-2024 ರಂದು 2 ಲಕ್ಷ ಬಾಕಿ ಪಾವತಿ ಮಾಡಿದ್ದಾರೆ. 2013 ರಲ್ಲಿ ಆರೋಪಿಯು ಈ ಕೇಸಿಗೆ ಸಂಬಂಧಿಸಿದಂತೆ ಚೆಕ್ಕನ್ನು ನೋಡಿದ್ದು, ಆತ 4 ಲಕ್ಷ ರೂಪಾಯಿಗಳನ್ನು ಪಾವತಿ ಮಾಡಿದ್ದರು. ಆರೋಪಿಯು ಒಮ್ಮೆ ನಗದು ರೂಪದಲ್ಲೂ ಮತ್ತೊಮ್ಮೆ ಸದರಿ ಹಣವನ್ನು ಕೊಟ್ಟಿರುತ್ತಾರೆ. ಆದರೆ ದಿನಾಂಕ ನೆನಪಿಲ್ಲ. ಆರೋಪಿಯು ತಾನು ಎಷ್ಟು ಬಾಕಿ ಇಡುತ್ತಾರೋ ಅಷ್ಟಕ್ಕೆ ಸಂಬಂಧಿಸಿದಂತೆ ಅವರ ಫರ್ಮ್ ಹೆಸರಿನಲ್ಲಿ

ಲೆಟರ್ ಕೊಟ್ಟಿರುತ್ತಾರೆ. ನಮ್ಮಲ್ಲಿ ಅಡಿಕೆ ಖರೀದಿಯನ್ನು ಶ್ರೀದೇವಿ ಸುಫಾರಿ ಫೈನಾನ್ಸ್ ಎನ್ನುವವರು ಖರೀದಿ ಮಾಡುತ್ತಿದ್ದರು. ಸದರಿ ಸುಫಾರಿ ಫೈನಾನ್ಸ್‌ನ ಪ್ರೊಪ್ರೈಟರ್ ವಿಜಯ ಜಯಪ್ಪ ಎಂಬುವವರಿದ್ದರು. ಅವರ ಫರ್ಮ್ ನಿಂದ ನಮಗೆ ಚೆಕ್ಕು ಬರುತ್ತಿತ್ತು. ಜಯಪ್ಪರವರು ಆರೋಪಿಯ ಯಜಮಾನರಾಗಿರುತ್ತಾರೆ. ಸದರಿಯವರು ನಮ್ಮಲ್ಲಿ ಯಾವುದೇ ವ್ಯವಹಾರ ಮಾಡಿರುವುದಿಲ್ಲ. ಸದರಿಯವರಿಂದ ನಮ್ಮ ಮಂಡಿಗೆ ಯಾವುದೇ ಬಾಕಿ ಬರಬೇಕಾಗಿಲ್ಲ.

**ಮುಂದುವರಿದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.**

**ತೆ ನ್ಯಾ ಬೆ ಮಾಡಲಾಯಿತು.**

**ಓ ಹೇ ಕೇ ಸರಿಯಿದೆ.**

**(ಗೀತಾಮಣಿ)**
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ತೀರ್ಥಹಳ್ಳಿ**